4

# ಸಾರ್ವತ್ರಿಕ ಸಹೋದರತ್ವ

*“ ‘ಇದಕ್ಕೆ ಪ್ರವಾದಿಗಳ ಮಾತುಗಳೂ ಒಪ್ಪುತ್ತವೆ, ... ಮನುಷ್ಯ ಜಾತಿಯ ಉಳಿದ ಜನಗಳೂ ಅಂದರೆ ದೇವಜನರೆನಿಸಿಕೊಳ್ಳುವ ಸಕಲ ಜನಾಂಗಗಳೂ ಕರ್ತನನ್ನು ಹುಡುಕುವವರಾಗಿರಬೇಕೆಂದು ಆದಿಯಿಂದ ಈ ಕಾರ್ಯಗಳನ್ನು ತಿಳಿಯಪಡಿಸುವ ಕರ್ತನು ನುಡಿಯುತ್ತಾನೆ’ ” (ಅಪೊಸ್ತಲರ ಕೃತ್ಯಗಳು 15:15-18).*

ಇಬ್ಬರು ಎಂಟು ವರ್ಷದ ಬಾಲಕರು ಬಹಿರಂಗ ಪ್ರದೇಶದಲ್ಲಿ ಒಬ್ಬರನ್ನೊಬ್ಬರು ಹೊಡೆಯಲು ಪ್ರಾರಂಭಿಸಿದರು. ತಗ್ಗಿಸಲ್ಪಟ್ಟ ಅವರ ತಾಯಂದಿರು ಅವರನ್ನು ಬೇರೆಯಾಗಿ ಎಳೆದು, “ಸರಿಯಾಗಿದೆ, ಈ ಜಗಳವನ್ನು ಯಾರು ಪ್ರಾರಂಭಿಸಿದರು?” ಎಂದು ಕೇಳಿದರು. ಬಾಲಕರಲ್ಲಿ ಒಬ್ಬನು ಅಳುತ್ತ, “ಅವನು *ಹಿಂದಿರುಗಿ* ನನ್ನನ್ನು ಹೊಡೆದಾಗ ಇದೆಲ್ಲವೂ ಪ್ರಾರಂಭವಾಯಿತು’’ ಎಂದು ವಿವರಿಸಿದನು. ಎಂಟು ವರ್ಷದವನು ಅದನ್ನು ಮಾಡಿರುವುದಿಲ್ಲ ಎಂಬಂತೆ ಅದು ಕೇಳಿಸಿತು?

ಹೀಗಿದ್ದರೂ, ಹೋರಾಟಕ್ಕೆ ನಿಜವಾದ ವಿಷಯವು ಅದನ್ನು ಯಾರು ಪ್ರಾರಂಭಿಸಿದರು ಎಂಬುದಲ್ಲ, ಆದರೆ ತೀರದ ಪರಿಣಾಮವು ಉಳಿಯದಂತೆ ಅದು ನಿರ್ಣಯಿಸಲ್ಪಡುವುದೋ ಇಲ್ಲವೋ ಎಂಬುದಾಗಿದೆ. ಒಂದು ಹೋರಾಟವು ಸರಿಯಾಗಿ ಬಗೆಹರಿಸಲ್ಪಡದಿದ್ದರೆ ಅಥವಾ ಅಲಕ್ಷಿಸಲ್ಪಟ್ಟರೆ, ಅದು ನಿಕಟವಾದ ಸ್ನೇಹಿತರುಗಳ ಮಧ್ಯದಲ್ಲಿಯೂ ಸಹ ದೀರ್ಘವಾದ ವಿರೋಧದಲ್ಲಿ ಮುಂದುವರಿಯುವಂತೆ ಮಾಡುವುದು.

ಅಪೊಸ್ತಲರ ಕೃತ್ಯಗಳು 15ರ ಪ್ರಕಾರವಾಗಿ, ಆದಿ ಸಭೆಯು *ಬೋಧನೆಯಲ್ಲಿ ಒಂದು ಹೋರಾಟವನ್ನು* ಅನುಭವಿಸಿತು, ಅದು ಅನ್ಯೋನ್ಯತೆಯಲ್ಲಿ ಒಂದು *ಸಂದಿಗ್ಧ ಸ್ಥಿತಿಯಾಗಿ* ತಿರುಗಿತ್ತು. ಯೂದಾಯದಿಂದ ಬಂದ ಕೆಲವು ಜನರು ಅನ್ಯರಿಂದ ಕ್ರೈಸ್ತರಾದ ಪುರುಷರು ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಸುನ್ನತಿ ಮಾಡಿಸಿಕೊಳ್ಳತಕ್ಕದ್ದು ಇಲ್ಲದಿದ್ದರೆ ಅವರು ಅರ್ಹ ಕ್ರೈಸ್ತರಾಗಿರುವುದಿಲ್ಲ ಮತ್ತು ರಕ್ಷಿಸಲ್ಪಡುವುದಿಲ್ಲ ಎಂದು ಬೋಧಿಸುತ್ತಿದ್ದರು (ವಚನ 1). ಈ ಯೆಹೂದಿ ಬೋಧಕರು ಅನ್ಯರಿಗಾಗಿ ರಕ್ಷಣೆಯ ಯೋಜನೆಗೆ ಇನ್ನೊಂದು ಹೆಜ್ಜೆಯನ್ನು, ಸುನ್ನತಿಯನ್ನು ಕೂಡಿಸಿದರು, ಕ್ರೈಸ್ತತ್ವದ ಅವರ ದೃಷ್ಟಿಕೋನವು ಪೌಲ ಮತ್ತು ಬಾರ್ನಬರು ತಮ್ಮ ಸೇವೆಯಲ್ಲಿ ಪ್ರಸಂಗಿಸುತ್ತಿದ್ದ ಪ್ರೇರೇಪಿತ ಸಂದೇಶಕ್ಕೆ ನೇರವಾಗಿ ವಿರುದ್ಧವಾದದ್ದಾಗಿತ್ತು. ಈ ಕಾರಣದಿಂದ, ಪೌಲ ಮತ್ತು ಬಾರ್ನಬರು ಯೂದಾಯದಿಂದ ಬಂದ ತಪ್ಪಾಗಿ ನಡಿಸಲ್ಪಟ್ಟ ಬೋಧಕರನ್ನು ಎದುರಿಸಿದರು ಮತ್ತು ಅವರೊಂದಿಗೆ ವಿಸ್ತಾರವಾದ ಚರ್ಚೆ ಮತ್ತು ವಾಗ್ವಾದವನ್ನು ಮಾಡಿದರು (ವಚನ 2).

ಬೋಧನೆಯಲ್ಲಿ ಭಿನ್ನಾಭಿಪ್ರಾಯವು ನಿರ್ಣಯಿಸಲ್ಪಡಲಿಲ್ಲ, ಮತ್ತು ಕ್ರೈಸ್ತತ್ವದ ಭವಿಷ್ಯದ ಮೇಲೆ ಪರಿಣಾಮ ಮಾಡಬಹುದಾದ ಒಡಕು ಉಂಟಾಯಿತು. ಕಠಿಣತೆಯಿಂದ

ಗಲಿಬಿಲಿಗೊಂಡು, ಅಂತಿಯೋಕ್ಯದಲ್ಲಿಯ ಸಹೋದರರು, ಬೋಧನೆಯ ಈ ಅಂಶದ ಮೇಲೆ ಇತರ ಅಪೊಸ್ತಲರೊಂದಿಗೆ ಹಾಗೂ ಇತರರೊಂದಿಗೆ ವಿಚಾರ ವಿನಿಮಯ ಮಾಡಲು ಪೌಲ ಮತ್ತು ಬಾರ್ನಬರನ್ನು ಹಾಗೂ ಇತರ ಸಹೋದರರನ್ನು ಯೆರೂಸಲೇಮಿಗೆ ಕಳುಹಿಸಲು ತೀರ್ಮಾನಿಸಿದರು.

ಪೌಲನು, ಪ್ರೇರೇಪಿತನಾದ ಅಪೊಸ್ತಲನಾಗಿದ್ದು, ಅನ್ಯಜನರ ರಕ್ಷಣೆಯ ಬಗ್ಗೆ ದೇವರ ಸತ್ಯವುಳ್ಳವನಾಗಿದ್ದನು ಮತ್ತು ಅದನ್ನು ಪ್ರಸಂಗಿಸುತ್ತಲಿದ್ದನು, ಹೀಗಿದ್ದರೂ ಅವನು ಸಭೆಯ ಐಕ್ಯತೆಯ ನಿಮಿತ್ತವಾಗಿ ಯೆರೂಸಲೇಮಿಗೆ ಹೋದನು. ಈ ವಿಷಯದ ಮೇಲೆ ದೇವರು ಏನನ್ನು ಪ್ರಕಟಿಸಿದ್ದಾನೆ ಎಂದು ತೋರಿಸುವ ಉದ್ದೇಶಕ್ಕಾಗಿ ಪ್ರೇರಿತ ಜನರನ್ನು ಒಂದುಗೂಡಿಸುವದಕ್ಕಾಗಿ ಅವನು ಹೋದನು, ಯೆರೂಸಲೇಮಿನಲ್ಲಿ ಒಂದು ವಿಶೇಷ ಕೂಟವು ಕೂಡಿಸಲ್ಪಟ್ಟಿತು. ಅಲ್ಲಿ ಈ ಪ್ರಶ್ನೆಯು ಅಪೊಸ್ತಲರಿಂದ ಮತ್ತು ಸಭೆಯ ಹಿರಿಯರಿಂದ ಚರ್ಚಿಸಲ್ಪಟ್ಟಿತು.

ಕೂಟದಲ್ಲಿ, ಪೇತ್ರನು ನಿಂತುಕೊಂಡನು ಮತ್ತು ದೇವರು ಯೆಹೂದ್ಯರಿಗೂ ಅನ್ಯರಿಗೂ ಮಧ್ಯದಲ್ಲಿ ಯಾವ ವ್ಯತ್ಯಾಸವನ್ನೂ ಮಾಡಲಿಲ್ಲ ಎಂಬುದನ್ನು ಒಪ್ಪಿ ಕೊಂಡನು. ಕೊರ್ನೇಲ್ಯನ ಕುಟುಂಬದ ಮೇಲೆ ಪರಿಶುದ್ಧಾತ್ಮನ ಅದ್ಭುತಕರವಾದ ಸುರಿಸುವೆಯು (ಅಪೊಸ್ತಲರ ಕೃತ್ಯಗಳು 10:44-48), ದೇವರು ಯೆಹೂದ್ಯರನ್ನು ರಕ್ಷಿಸುತ್ತಿರುವ ರೀತಿಯಲ್ಲಿಯೇ ಅನ್ಯರನ್ನು ರಕ್ಷಿಸುತ್ತಿರುವನು ಎಂಬ ಪಾಠವನ್ನು ಪೇತ್ರನು ಕಲಿತು ಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 15:7-11). ಯೆಹೂದ್ಯರಿಗೆ ಪ್ರಸಂಗಿಸಲ್ಪಟ್ಟ ಸುವಾರ್ತೆಯ ಸಂದೇಶದ ಮುಖಾಂತರ ತಮ್ಮ ಪ್ರಸಂಗಿಸುವ ಸೇವೆ ಯಲ್ಲಿ ದೇವರು ಅನ್ಯರನ್ನು ಹೇಗೆ ರಕ್ಷಿಸಿದ್ದಾನೆ ಎಂಬುದನ್ನು ಪೌಲ ಮತ್ತು ಬಾರ್ನಬರು ವಿವರಿಸಿದರು (ಅಪೊಸ್ತಲರ ಕೃತ್ಯಗಳು 15:12). ಅಂತಿಮವಾಗಿ, ಯಾಕೋಬನು ಕೊಡಲ್ಪಟ್ಟ ಭಾಷಣಗಳನ್ನು ಸಂಕ್ಷೇಪಿಸಿ, ಈ ಪ್ರಶ್ನೆಯ ಮೇಲೆ, ಭಿನ್ನವಾದ ಪ್ರೇರೇಪಿತ ಜನರಿಗೆ ದೇವರು ಪ್ರಕಟಿಸಿದ್ದನ್ನು ಪ್ರತಿನಿಧೀಕರಿಸುವ ಒಂದು ನಿರ್ಣಯವನ್ನು ಹೇಳಿದನು (ಅಪೊಸ್ತಲರ ಕೃತ್ಯಗಳು 15:13-21). ಅವನ ತೀರ್ಪು ಇದಾಗಿತ್ತು: ಇಬ್ಬರನ್ನೂ ಒಂದೇ ಯೋಜನೆಯ ಮುಖಾಂತರ ರಕ್ಷಿಸುವುದರಿಂದ ಒಂದೇ ತಳಹದಿಯ ಮೇಲೆ ದೇವರ ರಾಜ್ಯ ವನ್ನು ಪ್ರವೇಶಿಸಲಿಕ್ಕೆ ದೇವರು ಅನ್ಯ ಜನಾಂಗದವರಿಗೆ ಬಾಗಿಲನ್ನು ತೆರೆದಿದ್ದಾನೆ.

ಸಭೆಯ ಜಾಗತಿಕ ಭ್ರಾತೃತ್ವವನ್ನು ಕುರಿತು ತನ್ನ ವಿಷಯವನ್ನು ಯಾಕೋ ಬನು ರುಜುವಾತು ಪಡಿಸಿದನು, ಅವನು ಆಮೋಸ 9:11, 12ನ್ನು ಅನ್ಯರನ್ನು ಒಳಗೆ ತರುವ ದೇವರ ಉದ್ದೇಶವನ್ನು ಕುರಿತಾತ ಪ್ರವಾದಿಕ ಮುಂತಿಳಿಸುವಿಕೆಯನ್ನು ಉಲ್ಲೇ ಖಿಸಿದನು:

> "ಇದಾದ ಮೇಲೆ ನಾನು ಹಿಂತಿರುಗಿ ಬಂದು ದಾವೀದನ ಬಿದ್ದುಹೋಗಿರುವ ಗುಡಾರವನ್ನು ಎತ್ತುವೆನು. ಅದರಲ್ಲಿ ಹಾಳಾದದ್ದನ್ನು ನಾನು ಸರಿಮಾಡಿಸಿ ಅದನ್ನು ನೆಟ್ಟಗೆ ನಿಲ್ಲಿಸುವೆನು. ಮನುಷ್ಯ ಜಾತಿಯ ಉಳಿದ ಜನಗಳೂ ಅಂದರೆ ದೇವಜನರೆನಿಸಿಕೊಳ್ಳುವ ಸಕಲ ಜನಾಂಗಗಳೂ ಕರ್ತನನ್ನು ಹುಡುಕುವವ ರಾಗಿರಬೇಕೆಂದು ಆದಿಯಿಂದ ಈ ಕಾರ್ಯಗಳನ್ನು ತಿಳಿಯ ಪಡಿಸುವ ಕರ್ತನು ನುಡಿಯುತ್ತಾನೆ" (ಅಪೊಸ್ತಲರ ಕೃತ್ಯಗಳು 15:16-18).

ಪೇತ್ರನು ತಮ್ಮ ಮಧ್ಯದಲ್ಲಿ ಹೇಳಿದ ಮಾತುಗಳು ಹಳೇ ಒಡಂಬಡಿಕೆಯ ಪ್ರವಾದಿಗ ಳೊಂದಿಗೆ ಪೂರ್ಣ ಒಪ್ಪಂದದಲ್ಲಿ ಇರುವವೆಂದು ಯಾಕೋಬನು ಹೇಳಿದನು, ಮತ್ತು ಆಗ ಅನ್ಯರನ್ನು ನಮೂದಿಸಿದ ಅಮೋಸನ ಈ ಪ್ರವಾದನೆಯನ್ನು ಉಲ್ಲೇಖಿಸಿದನು.

ಆ ಐತಿಹಾಸಿಕ ಪಂಚಾಶತ್ತಮ ದಿನದಂದು ಸಭೆಯು ಸ್ಥಾಪಿಸಲ್ಪಟ್ಟಿತು, ಪೇತ್ರನು ಪರಿಶುದ್ಧಾತ್ಮನ ಸುರಿಸುವಿಕೆಯ ಕಡೆಗೆ ಗಮನ ಸೆಳೆದನು, "ಆದರೆ ಇದು ಪ್ರವಾದಿ ಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ" (ಅಪೊಸ್ತಲರ ಕೃತ್ಯಗಳು 2:16) ಎಂದು ಹೇಳಿದನು. "ಇದಕ್ಕೆ ಪ್ರವಾದಿಗಳ ಮಾತುಗಳೂ ಒಪ್ಪುತ್ತವೇ" (ಅಪೊಸ್ತಲರ ಕೃತ್ಯಗಳು 15:15) ಎಂದು ಯಾಕೋಬನು ಹೇಳಿದನು. ಒಬ್ಬ ಪ್ರೇರೇಪಿತ ಮನುಷ್ಯನು ತನ್ನ ಎದುರಿನಲ್ಲಿರುವ ಒಂದು ಘಟನೆಯನ್ನು, ವಾತಾವರಣವನ್ನು ಇಲ್ಲವೇ ಕೃತ್ಯವನ್ನು ನೋಡಿ, "ಇದು ಪ್ರವಾದಗಳು ಮುಂತಿಳಿಸಿದ್ದಾಗಿದೆ" ಎಂದು ಹೇಳುತ್ತ, ಹಳೇ ಒಡಂಬಡಿಕೆ ಪ್ರವಾದನೆಗೆ ಹಿಂದಿರುಗಿ ಸೂಚಿಸಿದರೆ, ಪ್ರವಾದನೆಯ ನೆರವೇರುವಿಕೆಯನ್ನು ತಪ್ಪಿಲ್ಲದೇ ಅರ್ಥಕೊಳ್ಳಲು ಶಕ್ತರಾಗುತ್ತೇವೆ.

ಆಮೋಸನ ಪ್ರವಾದನೆಯು ಸಭೆಯ ಜಾಗತಿಕ ಸಹೋದರತ್ವವನ್ನು ಮುಂತಿಳಿಸಿತು. ಯೆಹೂದ್ಯರು ಮತ್ತು ಅನ್ಯರು ಕ್ರಿಸ್ತನ ದೇಹವನ್ನು ಪ್ರವೇಶಿಸುವ ಮತ್ತು ಮುರಿಯಲ್ಪಡದ ಹಾಗೂ ಸಮಾಧಾನಕರವಾದ ಐಕ್ಯತೆಯಲ್ಲಿ ಒಂದಾಗಿ ಕೂಡಿ ಇರುವ ಸಮಯವನ್ನು ಚಿತ್ರಿಸುತ್ತದೆ. ಪೇತ್ರನು ಕೊರ್ನೇಲ್ಯನ ಕುಟುಂಬಕ್ಕೆ ಪ್ರಸಂಗಿಸಿದಂತೆ ಮತ್ತು ಪೌಲನು ಇತರ ಅನ್ಯರಿಗೆ ಪ್ರಸಂಗಿಸಿದಂತೆ, ಈ ಪ್ರವಾದನೆಯು ವಾಸ್ತವಿಕತೆಯಾಯಿತು. ಸುವಾರ್ತೆಯ ಮುಖಾಂತರ, ಅನ್ಯರು ದೇವರ ರಾಜ್ಯದ ಕುಟುಂಬದೊಳಗೆ ಬರುವವರಾಗಿದ್ದರು. ಯೆಹೂದ್ಯರು ಮತ್ತು ಅನ್ಯರು, ಎರಡು ಜನಾಂಗಗಳು, ಒಂದು ಆತ್ಮಿಕ ಜನಾಂಗ, ಸಭೆ ಆಗುತ್ತಿದ್ದರು. ಅನ್ಯರು ಯೆಹೂದ್ಯರಾಗಿ ಮಾಡಲ್ಪಡಲಿಲ್ಲ, ಮತ್ತು ಯೆಹೂದ್ಯರು ಅನ್ಯರಾಗಿ ಮಾಡಲ್ಪಡಲಿಲ್ಲ; ಯೆಹೂದ್ಯರು ಮತ್ತು ಅನ್ಯರು ಇಬ್ಬರೂ ಕ್ರೈಸ್ತರಾಗಿ, ದೇವರ "ಪರಿಶುದ್ಧ ಯಾಜಕತ್ವ"ವಾಗಿ ಮಾಡಲ್ಪಡುತ್ತಿದ್ದರು (1 ಪೇತ್ರ 2:5). ಯೆಹೂದ್ಯರು ಮತ್ತು ಅನ್ಯರು ಒಂದೇ ರೀತಿಯಲ್ಲಿ - ವಿಧೇಯ ವಿಶ್ವಾಸದ ಮುಖಾಂತರ ಕೃಪೆಯಿಂದ - ರಕ್ಷಿಸಲ್ಪಡುತ್ತಿದ್ದರು; ಮತ್ತು ಒಂದೇ ಜನಾಂಗ - ದೇವರ ಮಕ್ಕಳು ಆಗಿರುತ್ತಿದ್ದರು. ಕೃಪೆಯಿಂದ ರಕ್ಷಿಸಲ್ಪಟ್ಟವರೊಳಗೆ ಯಾವದೇ ಹುದ್ದೆಗಳು ಗುರುತಿಸಲ್ಪಡಲಿಲ್ಲ, ಜನಾಂಗ, ವಯಸ್ಸು, ಇಲ್ಲವೇ ಸಂಸ್ಕೃತಿಯ ಭಿನ್ನತೆಯಿಲ್ಲದೆ, ಒಬ್ಬನು ಬೇರೆಯವನಿಗಿಂತ ದೊಡ್ಡವನಾಗಿರಲಿಲ್ಲ; ಯಾವನೂ ಯಾವನಿಗಿಂತಲೂ ಕಡಿಮೆಯಾಗಿರಲಿಲ್ಲ.

ಕ್ರೈಸ್ತ ಅನ್ಯೋನ್ಯತೆಯ ಆಯಾಮಗಳನ್ನು ಸೂಚಿಸುವ ಈ ಪ್ರವಾದನೆಯ ನೆರವೇರುವಿಕೆಯ ಅರ್ಥಗಳನ್ನು ಯೋಚಿಸೋಣ. ಈ ಐಕ್ಯತೆಯ ವಿಶೇಷ ಗುಣಲಕ್ಷಣಗಳು ಯಾವವು? ಅದು ಎಷ್ಟು ಅರ್ಥಗರ್ಭಿತವಾಗಿದೆ? ಅದು ಹೇಗೆ ಸುತ್ತಿಕೊಳ್ಳಬಹುದಾದದ್ದಾಗಿದೆ?

## ಎಲ್ಲಾ ಪಾಪಕ್ಕೆ ಪತನ

ಮೊದಲನೆಯದಾಗಿ, ಸಭೆಯ ಸಹೋದರತ್ವದ ಬಲವುಳ್ಳ ಆಳವನ್ನು ನೋಡುತ್ತೇವೆ. ಎಲ್ಲಾ ಪಾಪಕ್ಕೆ ಯೇಸುವಿನ ರಕ್ತವು ಕೆಳಗೆ - ತಲುಪಿದ ಕಾರಣದಿಂದ ಮಾತ್ರವೇ ಬರಬಹುದಾದ ಒಂದುಗೂಡುವಿಕೆ ಅದಾಗಿದೆ. ಯಾವುದೇ ಪಾಪಿಯು ದೇವರ ಕೃಪೆಗೆ ತನ್ನ ಜೀವಿತವನ್ನು ತೆರೆದರೆ, ಅದರ ತಲುಪಿಕೆಯನ್ನು ದಾಟಿ ಇರುವದಿಲ್ಲ.

ಈ ಸಂಧಾನವು ಕ್ರಿಸ್ತನ ರಕ್ತದಿಂದ ಸೃಷ್ಟಿಸಲ್ಪಟ್ಟದ್ದರಿಂದ, ಅದಕ್ಕೆ ಆ ರಕ್ತದ ಬಲದಿಂದ ಸಮಾನಗೊಳಿಸುವಿಕೆಯ ಆಳವಿರುವುದು. *ಆತನ ರಕ್ತವು ಯಾವುದೇ ಪಾಪವನ್ನು, ಅದರ ಸ್ವಭಾವವನ್ನು ಲೆಕ್ಕಿಸದೇ ಶುದ್ಧೀಕರಿಸಬಲ್ಲದು, ಮತ್ತು ಎಲ್ಲಾ ಪಾಪಗಳು ಅವುಗಳ ಸಂಖ್ಯೆಯನ್ನು ಲೆಕ್ಕಿಸದೇ, ಸಂಪೂರ್ಣವಾಗಿ ಹಾಗೂ*

*ಎಂದೆಂದಿಗೂ ಶುದ್ಧೀಕರಿಸಲ್ಪಡುವವು.* ಆದುದರಿಂದ, ಈ ಅನ್ಯೋನ್ಯತೆಯಿಂದ ನಮ್ಮನ್ನು ಹೊರಗಿಡಬಹುದಾದ ಒಂದೇ ಆತಂಕವು ಪಶ್ಚಾತ್ತಾಪವಿಲ್ಲದಿರುವುದಾಗಿದೆ, "ಆ ದಿನದಲ್ಲಿ ಪಾಪವನ್ನೂ ಅಶುಚಿಯನ್ನೂ ಪರಿಹರಿಸತಕ್ಕ ಒಂದು ಬುಗ್ಗೆಯು ದಾವೀದನ ವಂಶದವರಿಗೂ ಯೆರೂಸಲೇಮಿನವರಿಗೂ ತೆರೆದಿರುವದು" (ಜೆಕರ್ಯ 13:1). ಹೀಗೆಂದು ಜೆಕರ್ಯನು, ಶುದ್ಧೀಕರಿಸುವ ಬುಗ್ಗೆಯ ಸಂಕೇತದಲ್ಲಿ ಮುಂತಿಳಿಸಿದಾಗ ಯೇಸುವಿನ ಬಲವಾದ ಶುದ್ಧೀಕರಿಸುವ ರಕ್ತದ ಬಗ್ಗೆ ಮಾತಾಡುತ್ತಿದ್ದನು.

ಜಾರರು, ವಿಗ್ರಹಾರಧಕರು ವ್ಯಭಿಚಾರಿಗಳು ವಿಟರು ಪುರುಷಗಾಮಿಗಳು ಕಳ್ಳರು ಲೋಭಿಗಳು ಕುಡಿಕರು, ಬೈಯುವವರು ಸುಲುಕೊಳ್ಳುವವರು ಎಂಬುದನ್ನು ನಮೂದಿಸಿದ್ದನ್ನು ಹಿಂಬಾಲಿಸಿ, ಪೌಲನು ಕೊರಿಂಥದವರನ್ನು ಹೀಗೆ ಹೇಳುವದರಿಂದ ಪ್ರೋತ್ಸಾಹಿಸಿದನು, "ನಿಮ್ಮಲ್ಲಿ ಕೆಲವರು ಅಂಥವರಾಗಿದ್ದೀರಿ; ಆದರೂ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದು ಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ" (1 ಕೊರಿಂಥ 6:9-11). ಈ ವಚನವು ಆಶ್ಚರ್ಯಕರವಾದ ಸತ್ಯವನ್ನು, ಸುವಾರ್ತೆಯ ದೊಡ್ಡ ಸತ್ಯವನ್ನು ಒಳಗೊಂಡಿರುತ್ತದೆ; ಕ್ರಿಸ್ತನ ಬಳಿಗೆ ಪಾಪಿಗಳು ಬರುವಾಗ ಅವರು ತೊಳೆಯಲ್ಪಡುತ್ತಾರೆ (ಶುದ್ಧೀಕರಿಸಲ್ಪಡುತ್ತಾರೆ), ಪ್ರತಿಷ್ಠಿಸಲ್ಪಡುತ್ತಾರೆ (ಪವಿತ್ರ), ಉಪಯೋಗಕ್ಕಾಗಿ ಪ್ರತ್ಯೇಕಿಸಿ ಇಡಲ್ಪಡುತ್ತಾರೆ, ಮತ್ತು ನೀತಿವಂತರೆಂದು ನಿರ್ಣಯಿಸಲ್ಪಡುತ್ತಾರೆ (ನಿರ್ದೋಷಿಗಳಾಗಿ ಮಾಡಲ್ಪಡುತ್ತಾರೆ)!

ಪೌಲನು ಯಾದಿಯ ಕಡೆಗೆ ಪುನಃ ನೋಡಿರಿ, ಮತ್ತು ಈ ಪಾಪಗಳ ಬಗ್ಗೆ ವಿಶೇಷವಾದ ನೋಟ ತೆಗೆದುಕೊಳ್ಳಿರಿ, ಅವು ತುಚ್ಛಕರವಾದವುಗಳಾಗಿದ್ದಾಗ್ಯೂ, ಕೊರಿಂಥದ ಮಾರ್ಪಟ್ಟವರನ್ನು ಸಭೆಯ ಅನ್ಯೋನ್ಯತೆಯಿಂದ ಹೊರಗೆ ಹಾಕಲಿಲ್ಲ. ವಿಧೇಯ ನಂಬಿಕೆಯೊಂದಿಗೆ ಅವರು ದೇವರ ಬಳಿಗೆ ಬಂದಾಗ, ತನ್ನ ಕುಮಾರನ ರಕ್ತದಿಂದ ಆ ಪಾಪಗಳನ್ನು ತೊಳೆದನು, ಅವರನ್ನು ನ್ಯಾಯವಂತರನ್ನಾಗಿ ಮಾಡಿದನು, ಮತ್ತು ಆ ದೇಹದಲ್ಲಿರುವ ಎಲ್ಲರಿಗೆ ಸರಿಸಮಾನರಂತೆ ಅವರನ್ನು ಕ್ರಿಸ್ತನ ದೇಹದೊಳಗೆ ತಂದನು. ಕೆಲವು ಪಾಪಗಳಿಗೆ ಇತರ ಪಾಪಗಳಿಗಿಂತ ವಿಶಾಲವಾದ ಪ್ರಭಾವವಿರುವದೆಂಬುದು ಸತ್ಯವಾಗಿದೆ, ಆದರೆ ಯಾವುದೇ ಹಾಗೂ ಎಲ್ಲಾ ಪಾಪವು ಒಬ್ಬನು ಯಥಾರ್ಥವಾದ ಮಾನಸಾಂತರದಲ್ಲಿ ದೇವರಿಗೆ ಉತ್ತರ ಕೊಡುವಾಗ ಕ್ಷಮಿಸಲ್ಪಡುತ್ತವೆ.

ವ್ಯಭಿಚಾರಿಯು ಇನ್ನು ಮುಂದೆ ವ್ಯಭಿಚಾರಿಯಾಗಿರದೆ ಮತ್ತು ಕಳ್ಳನು ಇನ್ನು ಮುಂದೆ ಕಳ್ಳನಾಗಿರದ ಸಮಯವು ಇರುವುದು. "ಯಾವಾಗ?" ಎಂದು ನೀವು ಹೇಳಬಹುದು. ದೇವರ ಕ್ಷಮಾಪಣೆಯಲ್ಲಿ. "ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (2 ಕೊರಿಂಥ 5:17) ಎಂದು ಪೌಲನು ಬರೆದನು. ಸುವಾರ್ತೆಯ ಕ್ರಿಸ್ತನು ಅಷ್ಟು ಮಹಿಮಾ ಸ್ವರೂಪನಾಗಿದ್ದನು. ಆತನಿಗೆ ನಮ್ಮ ಉತ್ತರದ ಮೇಲೆ, ಆತನು ನಮ್ಮ ಪಾಪದ ಹಳೇ ಜೀವಿತವನ್ನು ತೆಗೆದುಹಾಕುವನು ಮತ್ತು ನಮ್ಮನ್ನು ನೂತನ ಜೀವಿತದೊಂದಿಗೆ ತೊಡಿಸುವನು. ಹಾಗೂ ಆತ್ಮೀಕ ಆಶೀರ್ವಾದಗಳ ಪಾರಲೌಕಿಕ ಕ್ಷೇತ್ರದೊಳಗೂ ಮತ್ತು ದೈವಿಕ ಸಹವಾಸದೊಳಗೂ ತರುವನು.

ಯೇಸುವಿನಲ್ಲಿ ನೂತನ ವ್ಯಕ್ತಿಯಾಗುವದಕ್ಕಿಂತ ಹೆಚ್ಚು ದೊಡ್ಡದು ಯಾವುದೂ ಇರುವುದಿಲ್ಲ. ಒಬ್ಬ ವ್ಯಕ್ತಿಯು ಎಲ್ಲಿ ಇರುವನು, ಅವನು ಏನು ಮಾಡಿರುವನು, ಅವನು ಏನು ಹೇಳಿದನು, ಇಲ್ಲವೇ ಅವನು ಹೇಗೆ ಯೋಚಿಸಿದನು ಎಂಬುದರ ಬೇಧಭಾವ ಮಾಡದೇ ಯಜ್ಞದ ಕುರಿಯಾದಾತನ ರಕ್ತದಲ್ಲಿ ದೇವರು ಅವನನ್ನು ತೊಳೆದಿರುವನು.

ಕ್ರಿಸ್ತನ ಸ್ವರೂಪದಲ್ಲಿ ಅವನನ್ನು ಪುನಃ ರಚಿಸುವ ವಿಧಾನವು ಪ್ರಾರಂಭವಾಗುತ್ತದೆ, ಮತ್ತು ಕ್ರಿಸ್ತನಲ್ಲಿ ನೂತನ ಜೀವಿತವನ್ನು ಅವನಿಗೆ ಕೊಡುತ್ತದೆ. ಹೀಗೆ "ಪುನಃ ಪ್ರಾರಂಭಿಸುವ" ಕೇವಲ ಅಧಿಕೃತ ಸ್ಥಳವು ಕ್ರಿಸ್ತ ಯೇಸುವಿನಲ್ಲಿ ಇರುವುದು.

ಸಭೆಯ ಜೀವನದ ಆಳವನ್ನು ಜ್ಞಾಪಿಸಿಕೊಳ್ಳೋಣ. ಒಬ್ಬ ಪುರುಷನು ಅಥವಾ ಸ್ತ್ರೀಯು ಸುವಾರ್ತೆಗೆ ವಿಧೇಯತೆಯ ಮುಖಾಂತರ ಕ್ರಿಸ್ತನ ಬಳಿಗೆ ಬರುವಾಗ ಮತ್ತು ರಕ್ತದಲ್ಲಿ ತೊಳೆದುಕೊಳ್ಳಲ್ಪಡುವಾಗ, ಅವನು ಇಲ್ಲವೇ ಅವಳು ಕ್ರಿಸ್ತನಲ್ಲಿ ನಂಬಿಕೆಯಿಂದ ನೆಲೆಗೊಂಡಿರುವ ಇತರ ಎಲ್ಲರ ಸಹೋದರ ಇಲ್ಲವೇ ಸಹೋದರಿ ಆಗುವರು. ಒಬ್ಬನು ತೊಳೆಯಲ್ಪಡುವಾಗ, ಯಾವ ಕಲೆಯೂ ಉಳಿಯುವದಿಲ್ಲ; ಒಂದು ಸಂಪೂರ್ಣ ಶುದ್ಧೀ ಕರಣವು ದೇವರ ಕೃಪೆಯಿಂದ ಅನುಭವಿಸಲ್ಪಡುವುದು. ಕ್ರಿಸ್ತನ ದೇಹವನ್ನು ಯಾರೂ ಅರ್ಧಮಾರ್ಗದಲ್ಲಿ ಇಲ್ಲವೇ ಭಾಗವಾದ ಮಾರ್ಗದಲ್ಲಿ ಪ್ರವೇಶಿಸುವುದಿಲ್ಲ. ಅವನು ಕ್ರಿಸ್ತನಲ್ಲಿ ಇರುತ್ತಾನೆ ಇಲ್ಲವೇ ಅವನು ಇರುವುದಿಲ್ಲ, ಯಾವನೂ ಬಾಗಶಃವಾಗಿ ಅನ್ಯೋ ನ್ಯತೆಯಲ್ಲಿ ಇರಲಾರನು ಐದಂಶ ಶುದ್ಧೀಕರಿಸಲ್ಪಡಲಾರನು, ಇಲ್ಲವೇ ಒಂದು ಸಮಯಕ್ಕೆ ಒಂದು ಭಾಗದಂತೆ ಕ್ರಿಸ್ತನೊಳಗೆ ತರಲ್ಪಡಲಾರನು. ಯಾವನೂ ಹಂತಹಂತವಾಗಿ ರಕ್ಷಿಸಲ್ಪಡಲಾರನು. ಅವನು ಹಂತಹಂತವಾಗಿ ಬೋಧಿಸಲ್ಪಡಬಹುದು. ಆದರೆ ಅವನು ಒಂದು ಹಂತದಲ್ಲಿ ಕ್ರಿಸ್ತನನ್ನು ಪ್ರವೇಶಿಸುವನು - ಅದು ಕ್ರಿಸ್ತನೊಳಗೆ ಅವನ ಬಾಪ್ತಿಸ್ಮ ವಾಗಿರುವುದು (ಗಲಾತ್ಯ 3:27). ಒಬ್ಬ ವ್ಯಕ್ತಿಯು ಕ್ರಿಸ್ತನ ದೇಹವನ್ನು ಇಡೀಯಾಗಿ ಪ್ರವೇ ಶಿಸುವನು ಮತ್ತು ಕ್ರಿಸ್ತನ ರಾಜ್ಯದ ಇತರ ಎಲ್ಲಾ ಸದಸ್ಯರಂತೆ ಒಂದೇ ಸ್ಥಾನದಲ್ಲಿ ನಿಂತುಕೊಳ್ಳುವನು - ಸಂಪೂರ್ಣವಾಗಿ ನೀತಿವಂತನೆಂದು ನಿರ್ಣಯಿಸಲ್ಪಟ್ಟಿರುವನು ಮತ್ತು ಸಂಪೂರ್ಣವಾಗಿ ರಕ್ಷಿಸಲ್ಪಟ್ಟಿರುವನು. ಆದುದರಿಂದ, ಕ್ರೈಸ್ತರು ಪರಸ್ಪರರನ್ನು ಸಮಾನರಂತೆ ಗುರುತಿಸತಕ್ಕದ್ದು ಹಾಗೂ ದೇವರ ಕುಟುಂಬದಲ್ಲಿ ಒಬ್ಬರನ್ನೊಬ್ಬರು ಸಹೋದರ ಸಹೋದರಿಯರಂತೆ ನಡಿಸಿಕೊಳ್ಳತಕ್ಕದ್ದು.

## ಎಲ್ಲಾ ಜನಾಂಗಗಳಿಗೆ

ಅನಂತರ, ಸಭೆಯ ಅದ್ಭುತಕರವಾದ ವಿಶಾಲತೆಯ ಬಗ್ಗೆ ನೋಡುತ್ತೇವೆ. ದೇವರ ಕುಟುಂಬವು ಸಂಭವನೀಯವಾಗಿ ಮಾನವ ಕಟುಂಬದಷ್ಟು ವಿಶಾಲವಾಗಿದೆ, ಕುಲ, ಹಿನ್ನೆಲೆ ಇಲ್ಲವೇ ಸಂಸ್ಕೃತಿಯ ಕಾರಣದಿಂದ ಈ ಕುಟುಂಬವನ್ನು ಸೇರಲಿಕ್ಕೆ ಯಾರಿಗೂ ತಡೆಯಿರುವುದಿಲ್ಲ. ಅಪೊಸ್ತಲರ ಕೃತ್ಯಗಳು 15:16-18ರಲ್ಲಿ ಯಾಕೋಬನು ಆಮೋಸ 9:10, 11ನ್ನು ಉಲ್ಲೇಖಿಸಿದನು. ಯೆಹೂದ್ಯರಿಗೂ ಮತ್ತು ಅನ್ಯರಿಗೂ - ಇಬ್ಬರಿಗೂ ರಕ್ಷಣೆಯನ್ನು ಒದಗಿಸುವ ದೇವರ ಯೋಜನೆಯು ಪ್ರವಾದನೆಯಲ್ಲಿ ಮುಂತಿಳಿಸಲ್ಪಟ್ಟದ್ದನ್ನು ಮತ್ತು *ಅಪೊಸ್ತಲಿಕ ಪ್ರಸಂಗಿಸುವಿಕೆಯಲ್ಲಿ ನೆರವೇರಿಸಲ್ಪಟ್ಟಿದ್ದನ್ನೂ ರುಜುವಾತು ಪಡಿಸುವುದಕ್ಕಾಗಿ* ಇದು ಇತ್ತು.

ಮೂಲವಾಗಿ, ಹೊಸ ಒಡಂಬಡಿಕೆಯ ಜಗತ್ತಿನಲ್ಲಿ ಕೇವಲ ಎರಡು ಜನಾಂಗಗಳು ಅಸ್ತಿತ್ವದಲ್ಲಿದ್ದವು: ಯೆಹೂದ್ಯರು ಹಾಗೂ ಅನ್ಯರು. ಒಬ್ಬನು ಯೆಹೂದ್ಯನಾಗಿರದಿದ್ದರೆ, ಅವನು ಒಬ್ಬ ಅನ್ಯನಾಗಿದ್ದನು. ಆದುದರಿಂದ, ದೇವರ ರಾಜ್ಯಕ್ಕೆ ಯೆಹೂದ್ಯರಿಗೂ ಅನ್ಯರಿಗೂ ಇಬ್ಬರಿಗೂ ದೇವರು ಹೇಗೆ ಬಾಗಿಲನ್ನು ತೆರೆದನೆಂದು ರುಜುವಾತು ಕೊಡಲ್ಪಟ್ಟಾಗ, ದೇವರು ಇಡೀ ಲೋಕಕ್ಕಾಗಿ - ಎಲ್ಲಾ ಕುಲಗಳಿಗಾಗಿ - ತನ್ನ ರಾಜ್ಯ ವನ್ನು ಪ್ರವೇಶಿಸಲು ಅವಕಾಶವನ್ನು ಕೊಟ್ಟಿರುವನೆಂದು ರುಜವಾತು ನಿಜವಾಗಿಯೂ ಕೊಡಲ್ಪಟ್ಟಿತು.

ಪರಿಶುದ್ಧಾತ್ಮನು, ಪೇತ್ರನ ಮುಖಾಂತರ, ಪಂಚಾಶತ್ತಮ ದಿನದಂದು ರಕ್ಷಣೆಯ

ಮಾರ್ಗವನ್ನು ಪ್ರಕಟಿಸಿದಂತೆ, ಒಂದು ದಿನ, ಅವನು ಏನನ್ನು ಹೇಳಬೇಕೆಂದು ಪರಿಶುದ್ಧಾತ್ಮನು ತನ್ನನ್ನು ನಡಿಸುತ್ತಿರುವನೆಂದು ಪೇತ್ರನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳದಿದ್ದರೂ, ಎಲ್ಲಾ ಜನಾಂಗಗಳಿಗೆ ಸುವಾರ್ತೆಯು ಕೊಡಲ್ಪಡುವುದು ಎಂಬುದನ್ನು ತಿಳಿಸಿದನು. "ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ" ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:39). "ದೂರದಲ್ಲಿರುವವರೆಲ್ಲರಿಗೂ" ಎಲ್ಲರಿಗೂ ಎಂಬ ಮಾತು ಅತೀ ಹೆಚ್ಚು ನಿಶ್ಚಿತವಾಗಿ ಅನ್ಯಜಗತ್ತಿಗೆ ಸಂಬಂಧಿಸಿರುತ್ತದೆ. ಹೀಗಿದ್ದರೂ, ಅನಂತರದಲ್ಲಿ, ಪೇತ್ರನು ಕೊರ್ನೇಲ್ಯನ ಮನೆಗೆ ಹೋಗುವಂತೆ ಮತ್ತು ಅನ್ಯರಿಗೆ ಸುವಾರ್ತೆಯನ್ನು ಪ್ರಸಂಗಿಸುವಂತೆ ಮಾಡಲು ದೇವರು ಕಡಿಮೆ ಪಕ್ಷ ಐದು ಅಧಿಕೃತ ಪ್ರಕಟನೆಗಳ ನಿರ್ದೇಶನ ಕೊಡುವ ಅವಶ್ಯಕತೆ ಇತ್ತು; (1) ಅವನು ಕೊರ್ನೇಲ್ಯನಿಗೆ ಒಂದು ದರ್ಶನ ಕೊಟ್ಟನು (ಅಪೊಸ್ತಲರ ಕೃತ್ಯಗಳು 10:3-6); (2) ಆತನು ಪೇತ್ರನಿಗೆ ಒಂದು ದರ್ಶನ ಕೊಟ್ಟನು (ಅಪೊಸ್ತಲರ ಕೃತ್ಯಗಳು 10:9-16); (3) ಆತನು ಪೇತ್ರನಿಗೆ ಅವನನ್ನು ಕರೆದುಕೊಂಡು ಹೋಗಲು ಬಂದಿದ್ದ ಜನರೊಂದಿಗೆ ಹೋಗಲು ಆತ್ಮನ ಮುಖಾಂತರ ನಿರ್ದೇಶಿಸಿದನು (ಅಪೊಸ್ತಲರ ಕೃತ್ಯಗಳು 10:19, 20); (4) ಕೊರ್ನೇಲ್ಯನು ಪೇತ್ರನಿಗೆ ತಾನು ಹೊಂದಿಕೊಂಡ ದರ್ಶನದ ವಿವರವನ್ನು ಕೊಟ್ಟನು (ಅಪೊಸ್ತಲರ ಕೃತ್ಯಗಳು 10:30, 33); ಮತ್ತು (5) ದೇವರು ಪಂಚಾಶತ್ತಮ ದಿನದಂದು ಅಪೊಸ್ತಲರ ಮೇಲೆ ಪರಿಶುದ್ಧಾತ್ಮನನ್ನು ಸುರಿಸಿದಂತೆ ಕೊರ್ನೇಲ್ಯನ ಮನೆತನದವರ ಮೇಲೆ ಪರಿಶುದ್ಧಾತ್ಮನನ್ನು ಸುರಿಸಿದನು (ಅಪೊಸ್ತಲರ ಕೃತ್ಯಗಳು 10:44, 45). ಅಂತಿಮ ಸೂಚನೆಯು, ಕೊರ್ನೇಲ್ಯನ ಮೇಲೆ ಮತ್ತು ಅವನ ಕುಟುಂಬದ ಮೇಲೆ ಪರಿಶುದ್ಧಾತ್ಮನ ಸುರಿಸುವಿಕೆಯು, ಪೇತ್ರನಿಗೆ ನಿರ್ಣಾಯಕವಾದ ಸಂಗತಿಯಾಗಿತ್ತು, ಅವನ ತಕ್ಷಣದ ಪ್ರತಿಕ್ರಿಯೆಯು ಸಕಾರಾತ್ಮಕವಾದದ್ದೂ, ನಿರ್ಣಾಯಕವಾದದ್ದೂ ಆಗಿತ್ತು:

> "ನಮ್ಮ ಹಾಗೆಯೇ ಪರಿಶುದ್ಧಾತ್ಮ ವರವನ್ನು ಹೊಂದಿದ ಇವರಿಗೆ ನೀರಿನ ಬಾಪ್ತಿಸ್ಮವಾಗದಂತೆ ಯಾರಾದರೂ ಅಭ್ಯಂತರ ಮಾಡಾರೇ" (ಅಪೊಸ್ತಲರ ಕೃತ್ಯಗಳು 10:47).

ಯೆಹೂದ್ಯರು ರಕ್ಷಿಸಲ್ಪಟ್ಟಂಥ ರೀತಿಯಲ್ಲಿಯೇ ರಕ್ಷಿಸಲ್ಪಡಲು ಅನ್ಯ ಜನಾಂಗದವರಿಗೂ ಅವಕಾಶ ಕೊಡಬೇಕಾದ ದಿನವು ಬಂದಿರುವದೆಂಬುದನ್ನು ಪೇತ್ರನು ಸ್ಪಷ್ಟವಾಗಿ ತಿಳಿದುಕೊಂಡಿದ್ದನು.

ಯೇಸುವನ್ನು ಕ್ರಿಸ್ತನು, ಜೀವಿಸುವ ದೇವರ ಕುಮಾರನು ಎಂದು ಅರಿಕೆ ಮಾಡಿದ ದಿನದಂದು ಯೇಸುವು ಪೇತ್ರನಿಗೆ ಒಂದು ವಾಗ್ದಾನವನ್ನು ಮಾಡಿದ್ದನು: "ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು" (ಮತ್ತಾಯ 16:19). ಈ ವಾಗ್ದಾನವನ್ನು ಕೈಕೊಳ್ಳುವುದರಲ್ಲಿ, ಪಂಚಾಶತ್ತಮದ ದಿನದಂದು ಯೆಹೂದ್ಯರಿಗೆ ರಾಜ್ಯದೊಳಗೆ ಪ್ರವೇಶಿಸುವ ಶರತ್ತುಗಳನ್ನು ತಿಳಿಸುವ ಅವಕಾಶವು ಪೇತ್ರನಿಗೆ ಕೊಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2:37-39), ಮತ್ತು ಕೊರ್ನೇಲ್ಯನಿಗೂ ಅವನ ಕುಟುಂಬದವರಿಗೂ ರಕ್ಷಣೆಯ ಮಾರ್ಗವನ್ನು ತಿಳಿಸುವ ಅದೇ ಅವಕಾಶವು ಸಹ ಅವನಿಗೆ ಕೊಡಲ್ಪಟ್ಟಿತ್ತು (ಅಪೊಸ್ತಲರ ಕೃತ್ಯಗಳು

10:34-43).

ಬೈಬಲ್ ಕ್ಲಾಸುಗಳಲ್ಲಿ ನಾನು ಅಪೊಸ್ತಲರ ಕೃತ್ಯಗಳು 10ಕ್ಕೆ ಬರುವಾಗ, ಕ್ಲಾಸಿನಲ್ಲಿ ಯಾರಾದರೂ ಯೆಹೂದಿ ಜನಾಂಗದವರು ಇರುವರೋ ಎಂದು ಆಗಾಗ ಕೇಳುವೆನು. ಸಾಮಾನ್ಯವಾಗಿ ಯಾವ ಕೈಯೂ ಮೇಲಕ್ಕೆತ್ತಲ್ಪಡುವುದಿಲ್ಲ. ಅಪೊಸ್ತಲರ ಕೃತ್ಯಗಳು 10ಕ್ಕಾಗಿ ನಾವು ಕೃತಜ್ಞತೆಯುಳ್ಳವರಾಗಿರಬೇಕೆಂದು ನಾನು ಅವರಿಗೆ ಹೇಳುತ್ತೇನೆ, ಯಾಕಂದರೆ ಆ ಅಧ್ಯಾಯವು ಅನ್ಯರಾದ ನಮಗೆ ಯೆಹೂದ್ಯರು ರಕ್ಷಿಸಲ್ಪಡುವಂತೆ ಅದೇ ಶರತ್ತುಗಳ ಮುಖಾಂತರ ರಕ್ಷಿಸಲ್ಪಡಲು ಹಕ್ಕು ಇದೆಯೆಂದು ಹೇಳುತ್ತದೆ. ಆಗ ನಾವು ಅಪೊಸ್ತಲರ ಕೃತ್ಯಗಳು 10ಕ್ಕಾಗಿ ದೇವರಿಗೆ ಉಪಕಾರ ಸಲ್ಲಿಸಲು ಒಂದುಗೂಡುತ್ತೇವೆ!

ಸಭೆಯ ಸದಸ್ಯತ್ವದ ಅದ್ಭುತಕರವಾದ ವಿಶಾಲತೆಯ ಬಗ್ಗೆ ಯೋಚಿಸಿರಿ. ಜಗತ್ತಿನ ದೇಶಗಳನ್ನೂ ಕುಲಗಳನ್ನೂ ದೃಷ್ಟಿಸಿರಿ. ವಿವಿಧ ಭಾಷೆಗಳನ್ನೂ ಪದ್ಧತಿಗಳನ್ನೂ ಮತ್ತು ಸಂಸ್ಕೃತಿಗಳನ್ನೂ ಯೋಚಿಸಿರಿ, ಭೂಲೋಕದ ಎಲ್ಲಾ ಜನರನ್ನೂ ಮತ್ತು ಅವರು ಏನು ಮಾಡುವರು ಎಂಬದನ್ನೂ ಕಲ್ಪಿಸಿರಿ, ಜನರನ್ನೂ ಯುವಕರನ್ನೂ ಬಲಶಾಲಿಗಳನ್ನೂ ಮುದುಕರನ್ನೂ ಅಂಗವಿಕಲರನ್ನೂ ಚಿತ್ರಿಸಿಕೊಳ್ಳಿರಿ; ಮಹಿಳೆಯರನ್ನು - ಕನ್ನಿಕೆಯರನ್ನು, ಮದುವೆಯಾದವರನ್ನು, ಮಧ್ಯ ಪ್ರಾಯದವರನ್ನು ಮತ್ತು ಪ್ರಾಯಸ್ಥರಾದವರನ್ನು ಚಿತ್ರಿಸಿಕೊಳ್ಳಿರಿ. ಆಮೇಲೆ, ಸುವಾರ್ತೆಯು ಎಲ್ಲರಿಗಾಗಿ - ಎಲ್ಲಾ ಜನಾಂಗಗಳಿಗಾಗಿ, ಎಲ್ಲಾ ಕುಲಗಳಿಗಾಗಿ, ಎಲ್ಲಾ ಜನಾಂಗಿಕ ಗುಂಪುಗಳಿಗಾಗಿ, ಎಲ್ಲಾ ಕುಟುಂಬಗಳಿಗಾಗಿ ಮತ್ತು ಗಣಿಸಲ್ಪಡುವ ಎಲ್ಲಾ ವಯಸ್ಸಿನವರಿಗಾಗಿ ಇರುವುದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ. ಪೌಲನು ಹೇಳಿದಂತೆ, "ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ" (ಗಲಾತ್ಯ 3:28).

## ಎಲ್ಲಾ ಆತ್ಮಿಕ ಆಶೀರ್ವಾದಗಳ ವರೆಗೆ

ಮೂರನೆಯದಾಗಿ, ನಾವು ಸಭೆಯ ಸಹೋದರತ್ವದ ಪಾರಲೌಕಿಕ ಉನ್ನತೆಯನ್ನು ನೋಡುತ್ತೇವೆ. ಯೇಸುವಿನ ರಕ್ತದ ತಲುಪುವಿಕೆಯ ಕಾರಣದಿಂದ, ಕ್ರೈಸ್ತರಿಗೆ ಪರಲೋಕದ ಐಶ್ವರ್ಯಗಳ ಎಲ್ಲಾ ಸಮೃದ್ಧಿಗೆ ತೆರೆದಿರುವ ಬಾಗಿಲು ಇರುತ್ತದೆ. ಸಭೆ ಎಂದು ಕರೆಯಲ್ಪಡುವ ಕ್ರೈಸ್ತ ಜನಾಂಗವು ಇತರರಿಗಿಂತ ಹೆಚ್ಚು ಆಶೀರ್ವಾದ ಹೊಂದಿದ ವಿಶೇಷಾಧಿಕಾರವುಳ್ಳವರನ್ನು ಒಳಗೊಂಡಿರುವದಿಲ್ಲ, ದೇವರ ರಾಜ್ಯವು ಸರಿಸಮಾನ ಅವಕಾಶವಿದ್ದ ಸ್ಥಳವಾಗಿದೆ, ಮೇಲಿನ ವರ್ಗ, ಮಧ್ಯಮ ವರ್ಗ ಮತ್ತು ಕೆಳಗಿನ ವರ್ಗ ಎಂಬ ವಿಭಾಗಗಳು ಸಭೆಗೆ ತಿಳಿದಿರುವುದಿಲ್ಲ. ರಾಜ ವಂಶಸ್ಥ ಯಾಜಕತ್ವದಲ್ಲಿ ದ್ವಿತೀಯ ವರ್ಗದ ನಾಗರಿಕತ್ವ, ಗಡಿಮೇರೆಯ ಯಾಜಕರು ಇರುವುದಿಲ್ಲ. ಕ್ರಿಸ್ತನೊಳಗೆ ಬರಲು ಒಬ್ಬನು ನಿರಾಕರಿಸಿ ಕಳೆದು ಹೋಗಬಹುದು (ಎಫೆಸ 2:11, 12); ಒಬ್ಬನು ಕ್ರಿಸ್ತನಲ್ಲಿದ್ದು, ಕ್ರಿಸ್ತನಿಗೆ ಅಪನಂಬಿಗಸ್ತನಾಗಬಹುದು ಮತ್ತು ಕಳೆದು ಹೋಗಬಹುದು (2 ಪೇತ್ರ 2:21, 22); ಆದರೆ ಕ್ರಿಸ್ತನನ್ನು ಪ್ರವೇಶಿಸಿದವನಿಗೆ ಹಾಗೂ ಕ್ರಿಸ್ತನಲ್ಲಿ ನಂಬಿಗಸ್ತಿಕೆಯಿಂದ ನೆಲೆಗೊಂಡವನಿಗೆ ಎಲ್ಲಾ ಸಂಗತಿಗಳು ಇರುವವು ಮತ್ತು ಆ ವ್ಯಕ್ತಿಯ ಬಗ್ಗೆ ನಾವು ಹೀಗೆ ಹೇಳಬಹುದು: "ಪೌಲನಾಗಲಿ ಅಪೊಲ್ಲೋಸನಾಗಲಿ ಕೇಫನಾಗಲಿ, ಲೋಕವಾಗಲಿ ಜೀವವಾಗಲಿ, ಮರಣವಾಗಲಿ, ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಸಮಸ್ತವೂ ನಿಮ್ಮದೇ; ನೀವಂತೂ ಕ್ರಿಸ್ತನವರು, ಕ್ರಿಸ್ತನು ದೇವರವನು" (1 ಕೊರಿಂಥ 3:22, 23).

*ಕ್ರೈಸ್ತರು ಒಬ್ಬರನ್ನೊಬ್ಬರು ಸಮಾನರಂತೆ*
*ಗುರುತಿಸಬೇಕು ಮತ್ತು ಒಬ್ಬರನ್ನೊಬ್ಬರು*
*ದೇವರ ಕುಟುಂಬದಲ್ಲಿ ಸಹೋದರ*
*ಸಹೋದರಿಯರಂತೆ ನಡಿಸಿಕೊಳ್ಳತಕ್ಕದ್ದು.*

ಕ್ರಿಸ್ತನಲ್ಲಿರುವ ಯಾವನೇ ಆಗಲಿ, ವೈಯಕ್ತಿಕ ಮೆಚ್ಚಿಕೆಯೊಂದಿಗೆ ಪೌಲನ ಸ್ತುತಿಗೀತವನ್ನು ಹೇಳಬಹುದು: "ನಮ್ಮ ಕರ್ತನಾದ ಯೇಸು ಕ್ರಿಸ್ತ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತಯೇಸುವಿನಲ್ಲಿ ಅನುಗ್ರಹಿಸಿದ್ದಾನೆ" (ಎಫೆಸ 1:3). ಕ್ರಿಸ್ತನಲ್ಲಿ ನಾವು "ಸಂಪೂರ್ಣವಾಗಿ ಮಾಡಲ್ಪಟ್ಟಿದ್ದೇವೆ" ಎಂದು ಪೌಲನೊಂದಿಗೆ ನಾವು ಹೇಳಬಹುದು (ಕೊಲೊಸ್ಸೆ 2:10). ಕ್ರಿಸ್ತನಲ್ಲಿ ಇರುವವರಿಗೆ, ಇದನ್ನು ಹೇಳಬಹುದು, "ದೇವರು ಸಕಲವಿಧವಾದ ದಾನಗಳನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವುದಕ್ಕೆ ಶಕ್ತನಾದ್ದರಿಂದ ನೀವು ಯಾವಾಗಲೂ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರಾಗಿ ಸಕಲ ಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರಬೇಕು" (2 ಕೊರಿಂಥ 9:8).

"ನಮ್ಮನ್ನು ತನ್ನ ಪ್ರಭಾವದಿಂದಲೂ ಗುಣಾತಿಶಯದಿಂದಲೂ ಕರೆದ ದೇವರ ವಿಷಯವಾಗಿ ಯೇಸುವಿನ ದಿವ್ಯ ಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವು ದೊರೆಯಿತೆಂದು ಬಲ್ಲೆವಷ್ಟೆ" (2 ಪೇತ್ರ 1:3). "ವಿಶ್ವಾಸದ ಪೂರ್ವ ಭರವಸೆಯಲ್ಲಿ" ನಾವು ದೇವರ ಸಮೀಪಕ್ಕೆ ಬರಬಹುದು (ಇಬ್ರಿಯ 10:22), ಯಾಕಂದರೆ ಕ್ರಿಸ್ತನ ಮುಖಾಂತರ "ತಂದೆಯ ಬಳಿಗೆ ಒಂದೇ ಆತ್ಮನಲ್ಲಿ" ಪ್ರವೇಶಕ್ಕೆ ಮಾರ್ಗವಾಗಿದೆ (ಎಫೆಸ 2:18). ನಮಗೆ "ನಿಶ್ಚಿತವಾದ ಹಾಗೂ ಸ್ಥಿರವಾದ" ನಿರೀಕ್ಷೆಯಿದೆ (ಇಬ್ರಿಯ 6:19). ನಾವು ಯೇಸುವಿಗೆ ಒಳಪಟ್ಟವರಾಗಿದ್ದೇವೆ ಮತ್ತು ಯೇಸುವು - ತನ್ನ ಎಲ್ಲಾ ಮಹಿಮೆಯಲ್ಲಿ ಮತ್ತು ಕೃಪೆಯಲ್ಲಿ - ನಮಗೆ ಒಳಪಟ್ಟಿದ್ದಾನೆ. ಕ್ರಿಸ್ತನಲ್ಲಿರುವಲ್ಲಿ ನಾವಿದ್ದೇವೆ, ಮತ್ತು ಕ್ರಿಸ್ತನಿಗಿರುವಂಥದ್ದು ನಮ್ಮದಾಗಿದೆ, ಯಾಕಂದರೆ ನಾವು ಕ್ರಿಸ್ತನೊಂದಿಗೆ ಸಹ ಬಾಧ್ಯಸ್ಥರಾಗಿದ್ದೇವೆ (ರೋಮಾಪುರ 8:17).

ಅದು ಒಂದು ದೇಶದ ಪ್ರೆಸಿಡೆಂಟ್ ಇಲ್ಲವೇ ಪ್ರಧಾನ ಮಂತ್ರಿಯಂತೆ ಆಗಿರುವಂಥದ್ದಾಗಿದೆ. ದೇಶಕ್ಕೆ ನಿಮ್ಮ ಪ್ರಾಮುಖ್ಯತೆಯ ಕಾರಣದಿಂದ, ನಿಮಗೆ ಅತ್ಯುತ್ತಮ ಆಹಾರ, ಅತ್ಯಂತ ಯೋಗ್ಯವಾದ ಉಡುಪು, ರಕ್ಷಣೆಗಾಗಿ ಕಾವಲುಗಾರ, ಮತ್ತು ನಿಮ್ಮ ವಾಸಕ್ಕಾಗಿ ಒಂದು ಅರಮನೆ ಇರುವುದು. ಒಂದು ಅರ್ಥದಲ್ಲಿ, ದೇಶದ ಮೂಲದ್ರವ್ಯಗಳು ನಿಮ್ಮ ಆಜ್ಞೆಯಲ್ಲಿ ಇರುವವು. ನೀವು ವಾಸಿಸುತ್ತಿರುವ ಪಟ್ಟಣದ ರಕ್ಷಣೆಗಾಗಿ ದೇಶದ ಇಡೀ ಸೈನ್ಯವನ್ನು ನೀವು ಕರೆಯಬಹುದು. ನಿಮ್ಮ ಸ್ಥಾನದ ನಿಮಿತ್ತವಾಗಿ, ಸಾಮಾನ್ಯವಾದ ನಾಗರಿಕನಿಗೆ ಇರಲಾರದ ಅವಕಾಶಗಳಿಗೆ ಮತ್ತು ಒದಗಿಸುವಿಕೆಗಳಿಗೆ ಪ್ರವೇಶಗಳಿರುವವು.

ಹಾಗೆಯೇ, ಕ್ರಿಸ್ತನಲ್ಲಿ ನಮಗೆ ದೇವರ ಮಕ್ಕಳಿಗೆ ಒಳಪಡುವ ಎಲ್ಲಾ ಐಶ್ವರ್ಯಗಳೂ, ಹಕ್ಕುಗಳೂ ಮತ್ತು ಮೂಲವಿಧಿಗಳೂ ಲಭ್ಯವಿರುವವು. ನಾವು ಕ್ರಿಸ್ತನಲ್ಲಿ ಜೀವಿಸುವಂತೆ, ದೇವರು ತನ್ನ ಮಕ್ಕಳಿಗೆ ಒದಗಿಸಿದ್ದೆಲ್ಲವೂ ನಮ್ಮ ಗ್ರಹಿಕೆಯೊಳಗಿರುವುದು.

ಆಶೀರ್ವದಿಸಲ್ಪಡಲಿಕ್ಕೆ ಅವಕಾಶವಿರುವುದು ಒಂದು ಸಂಗತಿ, ಆದರೆ ಆ ಅವಕಾಶದ ಪೂರ್ಣ ಲಾಭ ಪಡೆಯುವುದು ಇನ್ನೊಂದು ಸಂಗತಿ, ಕ್ರಿಸ್ತನಲ್ಲಿ ದೇವರ ರಾಜ್ಯದಲ್ಲಿ ಇರುವುದರ ಲಾಭಗಳಿಗೆ ಸಂಪೂರ್ಣ ಅವಕಾಶ ನಮಗಿದೆ, ಆದರೆ (ತಿರಸ್ಕಾರ

ಇಲ್ಲವೇ ಅಜ್ಞಾನದ ಕಾರಣದಿಂದ) ಈ ಆತ್ಮಿಕ ಐಶ್ವರ್ಯಗಳನ್ನು ಸ್ವೀಕರಿಸುವುದರಲ್ಲಿ ನಾವು ಸೋತು ಹೋಗಬಹುದು. ಹೀಗಿದ್ದರೂ ಅದ್ಭುತಕರವಾದ ಸತ್ಯವನ್ನು ನಾವು ತಪ್ಪಿಸಿಕೊಳ್ಳಬಾರದು: *ದೇವರಿಗೆ ನಿಕಟವರ್ತಿಗಳಿರುತ್ತಾರೆ ಆದರೆ ಮೆಚ್ಚಿಕೆಯುಳ್ಳವರು ಇರುವುದಿಲ್ಲ.* ಕ್ರಿಸ್ತನಲ್ಲಿರುವ ಒಬ್ಬ ಮನುಷ್ಯನು ವಿಮೋಚಿತನಿಗಿರುವ ದೇವರ ಸಮೃದ್ಧಿ ಆಶೀರ್ವಾದಗಳು ಇಲ್ಲದೆ ಜೀವಿಸಿದರೆ, ಅದು ಅವನ ಕಾರಣವಲ್ಲ ಆದರೆ ಅವನ ಆಯ್ಕೆಯ ಕಾರಣವಾಗಿರುವುದು. ಯಾಕಂದರೆ ಅವನು ಒಂದು ಅವಕಾಶದ ವಂಚಿತನಾಗಿರುವನು. ದೇವರು ಕೊಟ್ಟ ಅವಕಾಶಗಳನ್ನು ಉಪಯೋಗಿಸದವನಾಗಿರುವನು ಮಾತ್ರವೇ, ಕ್ರಿಸ್ತನಲ್ಲಿ ಆತ್ಮಿಕ ಬಡತನದಲ್ಲಿ ಜೀವಿಸುವವನು.

ಸಭೆಯ ಸಮಾಜದ ಪಾರಲೌಕಿಕ ಉನ್ನತಿಯ ಬಗ್ಗೆ ಯೋಚಿಸಿರಿ. ಅದು ಭೂಲೋಕದಲ್ಲಿ ದೇವರು ಒದಗಿಸುವ ಅವಕಾಶದ ನಿಜವಾದ ಸಮಾನತೆಯಾಗಿದೆ. ಕ್ರಿಸ್ತನಲ್ಲಿ ಇತರ ಜನರೊಂದಿಗೆ ನಮ್ಮ ಸಂಬಂಧಗಳಲ್ಲಿ ಈ ಸತ್ಯವನ್ನು ಪ್ರತಿಬಿಂಬಿಸೋಣ ಮತ್ತು ಜೀವಿಸೋಣ. ಬಡತನ, ನೋಟ, ವಿದ್ಯೆ, ಇಲ್ಲವೇ ಜನಾಂಗಿಕತೆಯ ಕಾರಣದಿಂದ ಇತರ ಕ್ರೈಸ್ತರನ್ನು ಎಂದೂ ಕೀಳಾಗಿ ನೋಡದಿರೋಣ. ಇನ್ನೊಬ್ಬ ಕ್ರೈಸ್ತನನ್ನು ಅವನ ಇಲ್ಲವೇ ಅವಳ ಸ್ಥಾನ, ಬಲ, ಅವಕಾಶಗಳು ಇಲ್ಲವೇ ವ್ಯಕ್ತಿತ್ವದ ಕಾರಣದಿಂದ ಎಂದೂ ಉನ್ನತಕ್ಕೇರಿಸಬಾರದು, ನಾವೆಲ್ಲರೂ ಒಂದಾಗಿದ್ದೇವೆ; ಒಬ್ಬರೊ ಂದಿಗೆ ಒಬ್ಬರು ಮತ್ತು ಒಬ್ಬರಿಗಾಗಿ ಒಬ್ಬರು ಜೀವಿಸೋಣ (1 ಕೊರಿಂಥ 12:27).

## ಮುಕ್ತಾಯ

ಕ್ರಿಸ್ತನ ದೇಹವು ಸಾರ್ವತ್ರಿಕ ಸಹೋದರತ್ವವಾಗಿದೆ. ಅಪೊಸ್ತಲರ ಕೃತ್ಯಗಳು 15ರಲ್ಲಿ ಯಾಕೋಬನ ಪ್ರಕಾರವಾಗಿ, ಈ ರೀತಿಯ ಅನ್ಯೋನ್ಯತೆಯು ಆಮೋಸ 9:10, 11ರಲ್ಲಿ ಪ್ರವಾದಿಸಲ್ಪಟ್ಟಿತು. ಅವರ ನೆರವೇರುವಿಕೆಯನ್ನು ಅನ್ಯಜನರಿಗೆ ಅಪೊಸ್ತಲಿಕ ಪ್ರಸಂಗಿಸುವಿಕೆಯಲ್ಲಿ ನಾವು ನೋಡುತ್ತೇವೆ. ಅದಕ್ಕೆ ಪ್ರತಿಯೊಂದು ಪಾಪವನ್ನು ಅಳಿಸಿಹಾಕಲು ತಲುಪುವಷ್ಟು ಶಕ್ತಿಯುತವಾದ ಆಳವಿರುತ್ತದೆ. ಕ್ರಿಸ್ತನ ರಕ್ತದ ಬಲದ ಕಾರಣದಿಂದ, ಯಾವ ಪಾಪಿಯೂ ಅದರಿಂದ ಹೊರಗಿಡಲ್ಪಡುವ ಅಗತ್ಯತೆ ಇರುವುದಿಲ್ಲ, ಅದಕ್ಕೆ ಎಲ್ಲಾ ದೇಶಗಳನ್ನೂ ಜನಾಂಗಗಳನ್ನೂ ತಲುಪುವ ಅದ್ಭುತವಾದ ವಿಶಾಲತೆ ಇರುತ್ತದೆ. ಪ್ರತಿಯೊಬ್ಬ ವ್ಯಕ್ತಿಗಾಗಿ ಯೇಸುವು ಮರಣದ ರುಚಿ ನೋಡಿದನು ಮತ್ತು ರಕ್ಷಣೆಗಾಗಿ ಪ್ರತಿಯೊಬ್ಬರಿಗೆ ಅವಕಾಶಕೊಟ್ಟಿರುವನು (ಇಬ್ರಿಯ 2:9). ದೇವರೊಂದಿಗೆ ಮತ್ತು ಒಬ್ಬರಿಂದೊಬ್ಬರಿಗೆ ಈ ಸಂಬಂಧಕ್ಕೆ ಪಾರಲೌಕಿಕ ಎತ್ತರವಿರುವುದು, ಅದು ಕ್ರಿಸ್ತನಲ್ಲಿ ಕೃಪೆಯ ಪ್ರತಿಯೊಂದು ಅಮೂಲ್ಯ ಗುಣವನ್ನು ತಲುಪುವುದು. ಕ್ರಿಸ್ತನೊಳಗೆ ಬರುವವರಿಗೆ ಮತ್ತು ಕ್ರಿಸ್ತನಲ್ಲಿ ಜೀವಿಸುವವರಿಗೆ ಆತ್ಮಿಕ ಆಶೀರ್ವಾದಗಳು ವಿಫುಲವಾ ಗಿರುವವು!

ಗುಣಮಟ್ಟದ ಮತ್ತು ಸಮೃದ್ಧಪಡಿಸುವಿಕೆಯ ಈ ಕ್ಷೇತ್ರಕ್ಕಿಂತ ಹೆಚ್ಚಾಗಿ ಹೆಚ್ಚು ಆಕರ್ಷಣೀಯವಾದದ್ದನ್ನು ನೀವು ಯೋಚಿಸಬಹುದೋ? ಸಮಾಧಾನದ ಬಗ್ಗೆ ಜಗತ್ತು ಬಹಳವಾಗಿ ಮಾತಾಡುತ್ತದೆ, ಆದರೆ ಜಗತ್ತಿನಲ್ಲಿ ನಿಜವಾದ ಸಮಾಧಾನವನ್ನು ನೋಡುವುದೇ ಇಲ್ಲ. ಯಾಕೆ? ಎಲ್ಲಿ ನಿಜವಾದ ಸಮಾಧಾನವು ಇರುವುದು ಮತ್ತು ನಿಜವಾದ ಸಮಾಧಾನವು ಹೇಗೆ ತರಲ್ಪಡುವುದು ಎಂಬುದನ್ನು ಗುರುತಿಸುವಲ್ಲಿ ಸೋತುಹೋದದ್ದು ಇದಕ್ಕೆ ಕಾರಣವಲ್ಲವೇ? ನಿಜವಾದ ಸಮಾಧಾನವು, ದೇವರೊಂದಿಗೆ ಸಮಾಧಾನವು, ಇತರರೊಂದಿಗೆ ಸಮಾಧಾನವು, ಮತ್ತು ನಮ್ಮೊಂದಿಗೆ ಸಮಾಧಾನವು - ಕ್ರಿಸ್ತನ ದೇಹವಾದ ಸಭೆಯಲ್ಲಿ ಮಾತ್ರವೇ ಅನುಭವಿಸಲ್ಪಡಬಹುದು ಹಾಗೂ ಪ್ರದರ್ಶಿಸಲ್ಪಡಬಹುದು.

ಕ್ರಿಸ್ತನಿಗಿಂತ ಮೊದಲು ಏಳು ನೂರು ವರ್ಷಗಳಷ್ಟು ಹಿಂದೆ ಯೆಶಾಯನು ಬರಲಿಕ್ಕಿದ್ದ ಸಮಾಧಾನದ ರಾಜ್ಯದ ಬಗ್ಗೆ ಪ್ರವಾದನೆ ಹೇಳಿದನು:

> ತೋಳವು ಕುರಿಯ ಸಂಗಡ ವಾಸಿಸುವದು. ಚಿರತೆಯು ಮೇಕೆ ಮರಿಯೊಂದಿಗೆ ಮಲಗುವದು; ಕರುವೂ ಪ್ರಾಯದ ಸಿಂಹವೂ ಪುಷ್ಟ ಪಶುವೂ ಒಟ್ಟಿಗಿರುವವು; ಇವುಗಳನ್ನು ಚಿಕ್ಕ ಮಗುವು ನಡಿಸುವದು. ಹಸುವು ಕರಡಿಯು ಸಂಗಡ ಮೇಯುವವು; ಅವುಗಳ ಮರಿಗಳು ಜೊತೆಯಾಗಿ ಮಲಗುವವು; ಸಿಂಹವು ಎತ್ತಿನಂತೆ ಹುಲ್ಲು ತಿನ್ನುವದು. ಮೊಲೆಕೂಸು ನಾಗರ ಹುತ್ತದ ಮೇಲೆ ಆಡುವದು; ಮೊಲೆಬಿಟ್ಟ ಮಗು ಹಾವಿನ ಬಿಲದ ಮೇಲೆ ಕೈಹಾಕುವದು. ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಯಾರೂ ಕೇಡು ಮಾಡುವದಿಲ್ಲ. ಯಾರೂ ಹಾಳು ಮಾಡುವದಿಲ್ಲ; ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವದು (ಯೆಶಾಯ 11:6-9).

ಉನ್ನತವಾದ ಅಲಂಕಾರಿಕ ಭಾಷೆಯಲ್ಲಿ, ಯೆಶಾಯನು ಕ್ರಿಸ್ತನ ದೇಹದಲ್ಲಿ ಮಾತ್ರವೇ ತಿಳಿಯಬಹುದಾದ ಮಹಿಮೆಯುಳ್ಳ ಏಕತೆಯನ್ನು ಚಿತ್ರಿಸಿದನು. ಯೆಶಾಯನಿಗೆ, ಅದು ಕ್ರಿಸ್ತನು ಬಂದು ತನ್ನ ರಾಜ್ಯವನ್ನು ಸ್ಥಾಪಿಸಿದಾಗ ನೆರವೇರುವ *ಪ್ರವಾದನೆಯಾಗಿದೆ.* ಆದರೆ ನಮಗೆ ಕ್ರಿಸ್ತನಲ್ಲಿ ನಾವು ಅನುಭವಿಸುವ ದಿನನಿತ್ಯದ ಸಂಭವಿಸುವಿಕೆಯ *ಭಾಗವಾಗಿದೆ.* ನಾವು ಸತತವಾಗಿ ತೋಳದ ರೀತಿಯ ಗುಣವು ಕ್ರಿಸ್ತನ ಮುಖಾಂತರ ಪಾಲಿವಾಳದಂತೆ ಸಾಧುವಾಗುವಂಥದ್ದನ್ನು ನೋಡುತ್ತೇವೆ, ಮತ್ತು ಕುರಿಮರಿಯಂಥ ವ್ಯಕ್ತಿತ್ವದಿಂದ ಪಕ್ಕಪಕ್ಕದಲ್ಲಿ ನಡೆಯುತ್ತೇವೆ ಮತ್ತು ಕಾರ್ಯಮಾಡುತ್ತೇವೆ.

ಕ್ರಿಸ್ತನಲ್ಲಿ ನಾವು "ಒಬ್ಬ ನೂತನ ಮನುಷ್ಯನಾಗಿ" ಮಾಡಲ್ಪಟ್ಟಿದ್ದೇವೆ, ಯಾಕಂದರೆ ನಾವು ದೇವರೊಂದಿಗೆ ಮತ್ತು ಕ್ರಿಸ್ತನ ರಕ್ತದ ಮುಖಾಂತರ ಒಬ್ಬರಿಗೊಬ್ಬರು ಸಂಧಾನ ಮಾಡಲ್ಪಟ್ಟಿದ್ದೇವೆ; ಮತ್ತು ಬೆಳಕಿನಲ್ಲಿ ನಮ್ಮ ಅನುದಿನದ ನಡೆಯಿಂದ ಈ ಸಮಾಧಾನದಲ್ಲಿ ಬೆಳೆಯಿಸಲ್ಪಟ್ಟಿದ್ದೇವೆ (ಎಫೆಸ 2:15-18; 1 ಯೋಹಾನ 1:7).

ಕ್ರಿಸ್ತನ ದೇಹದ ಭ್ರಾತೃತ್ವದ ಒಂದು ಭಾಗ ನೀನಾಗಿರುವಿಯೋ? ನೀನು ಆಗಿರದಿದ್ದರೆ, ನೀನು ಕಳೆದುಕೊಂಡಿರುವ ಕೃಪೆ, ಸಂಬಂಧಗಳ ಮತ್ತು ಉದಾರವಾದ ವರಗಳ ಬಗ್ಗೆ ಯೋಚಿಸು "ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರು ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿದೆ" (1 ಕೊರಿಂಥ 12:13).

ಮನುಷ್ಯನ ಸಹೋದರತ್ವದ ಭಾಗವಾಗಿರುವುದು ಸಾಕಷ್ಟಾಗಿರುವುದಿಲ್ಲ. ನಾವು ದೇವರ ಕುಟುಂಬದ ಭಾಗವಾಗಿರತಕ್ಕದ್ದು.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಅಪೊಸ್ತಲರ ಕೃತ್ಯಗಳು 15ರ ಹಿನ್ನೆಲೆಯಲ್ಲಿ ಯಾವ ಸಂದಿಗ್ಧ ಪರಿಸ್ಥಿತಿಯಿತ್ತು?
2. ರಕ್ಷಣೆಯ ಯೋಜನೆಗೆ ಯೆಹೂದಿ ಕ್ರೈಸ್ತರು ಯಾವ ಹೆಜ್ಜೆಯನ್ನು ಕೂಡಿಸಿದರು?
3. ಯೆರೂಸಲೇಮಿನ ಕೂಟದಲ್ಲಿ ಯಾರು ಮಾತಾಡಿದರು, ಮತ್ತು ಅವರು ಏನನ್ನು ಹೇಳಿದರು?
4. ಯೆರೂಸಲೇಮಿನ ಸಮ್ಮೇಳನದಲ್ಲಿ ಕೊಡಲ್ಪಟ್ಟ ಭಾಷಣಗಳನ್ನು ಯಾಕೋಬನು ಹೀಗೆ ಸಂಕ್ಷೇಪಿಸಿ ಹೇಳಿದನು?
5. ಯೆರೂಸಲೇಮ ಸಮ್ಮೇಳನದ ಉದ್ದೇಶವು ಏನಾಗಿತ್ತು?

6. ಸುವಾರ್ತೆಯ ಕರೆಯಿಂದ ಹೊರಗಿಡಲ್ಪಟ್ಟವರ ಬಗ್ಗೆ ಮತ್ತು ಅವರು ಯಾಕೆ ಹೊರಗಿಡಲ್ಪಟ್ಟರು ಎಂಬುದರ ಬಗ್ಗೆ ವಿವರಿಸಿರಿ.
7. 1 ಕೊರಿಂಥ 6:9-11ನ್ನು ಚರ್ಚಿಸಿರಿ. ಸುವಾರ್ತೆಯ ವ್ಯಾಪ್ತಿಯ ಬಗ್ಗೆ ಈ ವಾಕ್ಯ ಭಾಗವು ನಮಗೆ ಏನನ್ನು ಹೇಳುತ್ತದೆ?
8. ನಾವು ಕ್ರಿಸ್ತನೊಳಗೆ ಬರುವಾಗ ದೇವರು ನಮಗೆ ಕೊಡುವ ನೂತನ ಜೀವನವನ್ನು ವಿವರಿಸಿರಿ.
9. ಅರ್ಥದಲ್ಲಿ ಯಾರೂ ಸಭೆಯನ್ನು ಪ್ರವೇಶಿಸಲಾರರು ಎಂಬುದು ಸತ್ಯವಾಗಿದೆಯೋ? ನಿಮ್ಮ ಉತ್ತರವನ್ನು ವಿವರಿಸಿರಿ.
10. ಸುವಾರ್ತೆಯು ಎಲ್ಲಾ ಜನರಿಗಾಗಿ - ಯೆಹೂದ್ಯ ಮತ್ತು ಅನ್ಯ ಇಬ್ಬರಿಗಾಗಿಯೂ ಇರುವದೆಂಬುದನ್ನು ಪರಿಶುದ್ಧ ಬರಹಗಳಿಂದ ಸಿದ್ಧಪಡಿಸಿರಿ.
11. ಗಲಾತ್ಯ 3:28ನ್ನು ವಿವರಿಸಿರಿ.
12. "ಎಲ್ಲಾ ಆತ್ಮಿಕ ಆಶೀರ್ವಾದಗಳಿಗೆ ಉಚಿತ ಅವಕಾಶ" ಎಂಬುದರ ಅರ್ಥವೇನು?
13. ಎಫೆಸ 1:3 ವಿವರಿಸಿರಿ.
14. "ಒಬ್ಬನು ಪುಸ್ತಕಗಳ ಒಡೆಯನಾಗಿರಬಹುದು ಮತ್ತು ಅವುಗಳನ್ನು ಹೊಂದಿಕೊಳ್ಳದವನಾಗಿರಬಹುದು" ಎಂಬ ವಾಕ್ಯಭಾಗವನ್ನು ಚರ್ಚಿಸಿರಿ. ಕ್ರೈಸ್ತನ ಆಶೀರ್ವಾದಗಳಿಗೆ ಇದು ಹೇಗೆ ಅನ್ವಯಿಸುತ್ತದೆ?
15. ಸಮಾಧಾನಕ್ಕೆ ನಿಜವಾದ ದಾರಿಯನ್ನು ವಿವರಿಸಿರಿ.

© 2009 Truth for Today